# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

ರಾಷ್ಟ್ರೀಯ ಸೇವಾ ಯೋಜನೆ

ಡಾ|| ಹೆಚ್.ಎನ್. ಜಗನ್ನಾಥ ರೆಡ್ಡಿ ಬಿ.ಇ.,ಎಂ.ಇ.,ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ : 0831–2405468
ಫ್ಯಾಕ್ಸ್ ಸಂ : 0831–2405467

ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ಸ್ವಾಕಾ/46/2018-19/ 4999 ದಿನಾಂಕ: 12 SEP 2018

**:ಸುತ್ತೋಲೆ:**

**ವಿಷಯ: ಸ್ವಾಮಿ ವಿವೇಕಾನಂದರ ಚಿಕಾಗೊ ಉಪನ್ಯಾಸದ 125ನೇ ವರ್ಷಚರಣೆಯನ್ನು ಆಚರಿಸುವ ಕುರಿತು.**

**ಉಲ್ಲೇಖ:** ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಯುಸಕ್ರೀಇ/ಯುಸೇ/ಸ್ವಾಕಾ/15/18–19/ದಿನಾಂಕ:01.09.2018

**ಉಲ್ಲೇಖ:** ಯುಸೇಇ/ರಾಸೇಯೋ/2018–19/192 ದಿನಾಂಕ: ದಿನಾಂಕ: 05.09.2018

ಈ ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಅಧಿನಕ್ಕೊಳಪಡುವ ಸಂಬಂದಪಟ್ಟ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳ ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳಿಗೆ ಈಗಾಗಲೇ ತಮ್ಮಗೆ ತಿಳಿದಿರುವಂತೆ, ಸ್ವಾಮಿ ವಿವೇಕಾನಂದರು 1893ರಲ್ಲಿ ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಭಾರತದ ತತ್ವಾದರ್ಶಗಳನ್ನು ಹೃದಯಸ್ಪರ್ಶಿಯಾಗಿ ಅಲ್ಲಿ ಹಾಜರಿದ್ದ ಪ್ರತಿನಿಧಿಗಳಿಗೆ ತಿಳಿಸಿ ಜಗತ್ಪ್ರಸಿದ್ದವಾದ ದಿನ 11ನೇ ಸೆಪ್ಟಂಬರ್. ಈ ಐತಿಹಾಸಿಕ ಭಾಷಣ ನೀಡಿ 11ನೇ ಸೆಪ್ಟಂಬರ್ 2018ಕ್ಕೆ 125 ವರ್ಷಗಳಾಗಿದ್ದು, 11ನೇ ಸೆಪ್ಟಂಬರ್ 2018 ರಿಂದ 11ನೇ ಸೆಪ್ಟಂಬರ್ 2019 ರವರೆಗೆ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರವು ನಿರ್ಧರಿಸಿದೆ. ಯುವ ಪೀಳಿಗೆಗೆ ಹಾಗೂ ಸಾರ್ವಜನಿಕರಿಗೆ ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಜೀವನ ಮೌಲ್ಯಗಳು, ವಿಶ್ವಶಾಂತಿ ಮತ್ತು ವಿವಿಧತೆಯಲ್ಲಿ ಏಕತೆಯ ಬಗ್ಗೆ ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿರುವ ಭಾಷಣದ ತುಣುಕಗಳು ಹಾಗೂ ಸಾರ್ವಜನಿಕ ಸಭೆಗಳಲ್ಲಿ ಮಾಡಿರುವ ಭಾಷಣಗಳನ್ನು ತಲುಪಿಸುವುದು ಅವಶ್ಯವಾಗಿರುತ್ತದೆ.

ರಾಷ್ಟ್ರೀಯ ಸೇವಾ ಯೋಜನೆಯು, ವಿಚಾರಸಂಕಿರಣ, ಜಾಗೃತಿ ಜಾಥಾ ಕಾರ್ಯಕ್ರಮಗಳು, ಯುವಜನರಲ್ಲಿ ಅರಿವು ಮೂಡಿಸುವ ಬಗ್ಗೆ ಭಾಷಣ, ಚರ್ಚಾಕೂಟದಂತಹ ಕಾರ್ಯಕ್ರಮಗಳನ್ನು ರೂಪಿಸಿ ಸಮಾಜದಲ್ಲಿ ಏಕತೆಯ ಭಾವನೆಯನ್ನು ಪಸರಿಸಲು ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳಬೇಕಾಗಿದೆ, ಕಾರ್ಯಕ್ರಮಾಧಿಕಾರಿಗಳು ಸ್ಥಳೀಯ ಜಿಲ್ಲಾ ಮಟ್ಟದ ಕನ್ನಡ ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಥಳೀಯ ಶಾಲಾ ಕಾಲೇಜುಗಳು ಹಾಗೂ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ಸದರಿ ದಿನದಂದು ಜಿಲ್ಲಾ ಮಟ್ಟದ ಕಾರ್ಯಕ್ರಮಗಳನ್ನು ಏರ್ಪಡಿಸಲು ವ್ಯವಸ್ಥೆ ಮಾಡಲು ಆದೇಶಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ ಸ್ಥಳೀಯ ರಾಮಕೃಷ್ಣ ಮಿಷನ್‌ನ ಸಹಕಾರವನ್ನು ಪಡೆಯಬಹುದಾಗಿದೆ. ಮುಂದುವರೆದು ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳಿರುವ ಎಲ್ಲಾ ಕಾಲೇಜುಗಳಲ್ಲಿ ಚಿಕಾಗೊ ಉಪನ್ಯಾಸದ ಬಗ್ಗೆ ಕಾರ್ಯಕ್ರಮವನ್ನು ಏರ್ಪಡಿಸಬೇಕೆಂದು ತಿಳಿಸಲಾಗಿದೆ. ಅದ್ದರಿಂದ **11ನೇ ಸೆಪ್ಟಂಬರ್ 2019 ರವರೆಗೆ** ವಾರ್ಷಿಕೋತ್ಸವವನ್ನು ಕಾಲೇಜುಗಳಲ್ಲಿ ಸ್ವಾಮಿ ವಿವೇಕಾನಂದರ ಚಿಕಾಗೊ ಉಪನ್ಯಾಸದ ಬಗ್ಗೆ ಕಾರ್ಯಕ್ರಮಗಳನ್ನು ಏರ್ಪಡಿಸಲು ಕಾರ್ಯಕ್ರಮಾಧಿಕಾರಿಗಳಿಗೆ ಸೂಚಿಸಲು ಕೋರಲಾಗಿದೆ.

ಸ್ವಾಮಿ ವಿವೇಕಾನಂದರ ತತ್ವಗಳು ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶಗಳಿಗೆ ಅನುಗುಣವಾಗಿರುವುದರಿಂದ ಚಿಕಾಗ್ಯೂ ಉಪನ್ಯಾಸದ 125ನೇ ವಾರ್ಷಿಕೋತ್ಸವ ಅಂಗವಾಗಿ ಅವರ ಕ್ರಾಂತಿಕಾರಿ ಚಿಂತನೆಗಳನ್ನು ಯುವ ಮನಸ್ಸಿಗೆ ತಲುಪುವ ಕಾರ್ಯವನ್ನು ರಾ.ಸೇ.ಯೋ ಘಟಕಗಳು ಮಾಡಬೇಕಾಗಿದೆ.

ಆದುದರಿಂದ ಕಾರ್ಯಕ್ರಮಾಧಿಕಾರಿಗಳು ವಿಶೇಷ ಆಸಕ್ತಿ ವಹಿಸಿ ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

11/09/18

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧಿನಕ್ಕೊಳಪಡುವ ಸಂಬಂದಪಟ್ಟ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್.ಅಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನಾ ಕೋಶ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಕಡತಕ್ಕೆ.